

ನೀರು ಕುಡಿದವರಿಗೆ ಸಂದೇಹ ಕೊರೆಯುತ್ತಿತ್ತು. ಎದುರು ಬಂದ ಏರ್‌ಪೋರ್ಟ್ ಸ್ಟಾಫ್ ಒಬ್ಬರನ್ನ 'ಇಂಡಿಯಾ... ಮುಂಬಯಿ ಫ್ಲೈಟ್?...' ಅಂತ ವಿಚಾರಿಸಿದ್ದಕ್ಕೆ ಆತ ನಿಂತು ನೆನಪಿಸಿಕೊಂಡು ಬಲಕ್ಕೆ ಕೈತೋರಿಸಿ ಟ್ವೆಂಟಿಟೂ ಅಂದ. ನೋಡಿದ್ಯಾ? ಎನ್ನುವಂತೆ ಹೆಂಡತಿಯತ್ತ ನೋಡಿ ಸಾಮಾನೆಳೆದುಕೊಂಡು ಅರ್ಧ ಫರ್ಲಾಂಗು ದೂರದ ಆ ಗೇಟನ್ನು ತಲುಪುವಾಗ ಅಲ್ಲಿ ಸಣ್ಣಸಾಲು ಒಳಹೋಗುತ್ತಿತ್ತು. ತಮ್ಮ ಟಿಕೆಟ್ ಸ್ಲಿಪ್ ತೋರಿಸಿದಾಗ, 'ಏರ್ ಫ್ರಾನ್ಸ್' ಅಂತ ಮೊದಲು ಇವರಿದ್ದ ಜಾಗೆಗೆ ಕೈತೋರಿಸಿದ. ಅದು ಬ್ರಿಟಿಷ್ ಏರ್‌ವೇಸ್ ಪ್ರಯಾಣಿಕರದ್ದಾಗಿತ್ತು. ಅರ್ಧ ಫರ್ಲಾಂಗು ಮತ್ತೆ ಕಾಲೆಳೆದುಕೊಂಡು ಬರುವ ಸಂಕಟ, ಆದ ಮುಖಭಂಗ ಸೇರಿ ಮೆನನ್ನರ ಬೀಪಿ ಏರತೊಡಗಿತು. ಮೊದಲಿನ ಕೌಂಟರಿನಲ್ಲಿದ್ದವನ ಹತ್ತಿರ ಹೋಗಿ ಚೀಟಿ ತೋರಿಸಿ ಮುಂಬಯಿ ಫ್ಲೈಟು ಇಲ್ಲೇ ಬರುತ್ತೆ ತಾನೇ? ಸಮಯಕ್ಕೆ ಸರಿಯಾಗಿ ಬರುತ್ತೆ ತಾನೇ? ಅಂತ ಇಂಗ್ಲೀಷಿನಲ್ಲಿ ಕೇಳಿದರು. ಆತ ಅದೇ ಶಾಂತ ಮುಖಮುದ್ರೆಯಿಂದ ಫ್ರೆಂಚಿನಲ್ಲಿ ವಿವರಿಸತೊಡಗಿದ. ಮೆನನ್ ಕರಕರೆಯಾಗಿ ಇಂಗ್ಲೀಷಿನಲ್ಲಿ ಹೇಳಿ ಅಂತ ಗದರಿದರು. ಆತ ನೋ ಇಂಗ್ಲಿಷ್ ಅಂತ ಮತ್ತೆ ಫ್ರೆಂಚಿನಲ್ಲಿ ಏನೇನೋ ಸುರುಮಾಡಿದ. ಮೆನನ್‌ಗೆ ಸಿಟ್ಟು ತಾರಕಕ್ಕೇರಿತು. 'ಏ, ಏನು ನೋ ಇಂಗ್ಲಿಷ್? ಏನು ತಮಾಷೆ ಮಾಡತಿದೀಯ? ನಿಮ್ಮೂರ ಮೇಲೆ ಹಾರೋ ಹದ್ದು ಕಾಗೆ ಎಲ್ಲಾ ಫ್ರೆಂಚ್ ಕಲ್ತೇ ಬರ್ತಾವಾ? ನನ್ನೇನು ಗಮಾರ ಅಂದ್ಕೊಂಡಿದೀಯ? ಜೋರ್ಡಾನ್ ರಿಟರ್ನ್‌ಡ್ ನಾನು, ಎಂಜಿನಿಯರು. ಜೋರ್ಡಾನಿನಲ್ಲಿ ಎಷ್ಟು ರೆಸ್ಪೆಕ್ಟಿಂದ ನಡೆಸಿಕೊಳ್ತಿದ್ದರು ಗೊತ್ತಾ? ಅಲ್ಲಿಹೋಗಿ ಕಲೀರಿ...' ಅಂತ ಎತ್ತರ ಸ್ವರದಲ್ಲಿ ಬಾರಿಸಹತ್ತಿದರು. ಒಂದೂ ತಿಳಿಯದೆ ಬೆಪ್ಪಾಗಿ ಕುಳಿತಿದ್ದ ಫ್ರೆಂಚ್ ಅಧಿಕಾರಿಗೆ ಜೋರ್ಡಾನ್